# ಹಾವೇರಿ ಜಿಲ್ಲೆಯಲ್ಲಿ ಅರಣ್ಯ ಸತ್ಯಾಗ್ರಹ

**ಶಿವರಾಜ ಹೂಗಾರ**

ಸಹಾಯಕ ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಸಿ.ಜಿ. ಬೆಲ್ಲದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಕ್ಕಿಆಲೂರು.

DOI: https://doi.org/10.5281/zenodo.17411514

## ABSTRACT:

ಹಾವೇರಿ ಜಿಲ್ಲೆಯ ಅರಣ್ಯ ಸತ್ಯಾಗ್ರಹವು ಭಾರತದ ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಬ್ರಿಟಿಷರ ಕಠಿಣ ಅರಣ್ಯ ಕಾನೂನು ಮತ್ತು ಗೋಮಾಳ ಮೇಲಿನ ತೆರಿಗೆಯ ವಿರುದ್ಧ ನಡೆದ ಒಂದು ಪ್ರಮುಖ ಅಹಿಂಸಾತ್ಮಕ ಚಳುವಳಿಯಾಗಿತ್ತು. ಶಿಗ್ಗಾವಿ, ಹಾನಗಲ್ಲ, ಬ್ಯಾಡಗಿ ಮತ್ತು ಹಿರೇಕೆರೂರು ತಾಲೂಕುಗಳಲ್ಲಿ ಇದು ವ್ಯಾಪಿಸಿತ್ತು. ಆಲದಕಟ್ಟಿ, ಕಣ್ಣೂರು, ಸಂಗೂರು ಮುಂತಾದ ಗ್ರಾಮಗಳಲ್ಲಿ ಜನರು 'ಹುಲಬನ್ನಿ ಲೀಲಾವ' (ಗೋಮಾಳ ತೆರಿಗೆ) ನಿರಾಕರಿಸಿದರು. ಬಂಕಾಪುರದಲ್ಲಿ ಸೇಂದಿ ಗಿಡ ಕಡಿಯುವ ಕಾರ್ಯಕ್ರಮ ಹಾಗೂ ನೀರಲಗಿ ಗ್ರಾಮದ ಬಳಿ ಮರಗಳ ಸಂಹಾರ ನಡೆಯಿತು. ಮುದವೀಡು ಕೃಷ್ಣರಾಯರು ಬಂಕಾಪುರ ಮೆರವಣಿಗೆಯ ನೇತೃತ್ವ ವಹಿಸಿದ್ದರು. ಹಿರೇಕೆರೂರು ತಾಲೂಕಿನ ನಾಗವಂದ ಗ್ರಾಮದ ಹಾರಿಕಟ್ಟಿ ಜಂಗಲ್‌ನಲ್ಲಿ ಕಾನೂನು ಭಂಗ ಮತ್ತು ಅರಣ್ಯ ನಾಶ ಮಾಡಲಾಯಿತು. ಈ ಸತ್ಯಾಗ್ರಹವು ಸ್ಥಳೀಯ ಜನರ ಹಕ್ಕು, ಸ್ವಾಭಿಮಾನ ಮತ್ತು ಪರಿಸರ ಪ್ರಜ್ಞೆಯನ್ನು ಎತ್ತಿ ಹಿಡಿಯಿತು.

## KEYWORDS:

ಅರಣ್ಯ ಸತ್ಯಾಗ್ರಹ, ಹಾವೇರಿ ಜಿಲ್ಲೆ, ಹುಲಬನ್ನಿ ಲೀಲಾವ, ಮುದವೀಡು ಕೃಷ್ಣರಾಯ, ಕಾನೂನು ಭಂಗ.

**ಪೀಠಿಕೆ.**

ಅರಣ್ಯ ಸತ್ಯಾಗ್ರಹವು ಭಾರತದ ಸ್ವಾತಂತ್ರ್ಯ ಹೋರಾಟದ ಒಂದು ಪ್ರಮುಖ ಅಧ್ಯಾಯವಾಗಿದ್ದು, ಅದು ರಾಜಕೀಯ ಹೋರಾಟದ ಪಕ್ಕದಲ್ಲಿಯೇ ಸಾಮಾಜಿಕ ಹಾಗೂ ಪರಿಸರ ಚಳವಳಿಯ ರೂಪದಲ್ಲಿಯೂ ಬೆಳೆದಿತ್ತು. ಬ್ರಿಟಿಷರು ಅರಣ್ಯ ಪ್ರದೇಶಗಳ ಮೇಲಿನ ಸಂಪೂರ್ಣ ಹಕ್ಕನ್ನು ತಮ್ಮದಾಗಿಸಿಕೊಂಡು, ಸ್ಥಳೀಯ ಜನರ ಜೀವನೋಪಾಯಕ್ಕೆ ತೀವ್ರ ಹಾನಿ ಉಂಟುಮಾಡಿದರು. ಅರಣ್ಯಗಳಲ್ಲಿ ವಾಸಿಸುತ್ತಿದ್ದ ಜನಾಂಗಗಳು, ರೈತರು ಮತ್ತು ಬುಡಕಟ್ಟು ಸಮುದಾಯಗಳು ಅರಣ್ಯ ಸಂಪತ್ತುಗಳಾದ ಮರ, ಎಲೆ, ಹುಲ್ಲು, ಹಣ್ಣು ಹಾಗೂ ಇತರ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಅವಲಂಬಿತರಾಗಿದ್ದರು. ಆದರೆ ಬ್ರಿಟಿಷರ ಕಠಿಣ ಅರಣ್ಯ ಕಾನೂನುಗಳು ಇವರ ಬದುಕಿನ ಮೂಲಗಳನ್ನೇ ಕಿತ್ತುಕೊಂಡವು.

ಈ ಅನ್ಯಾಯದ ವಿರುದ್ಧ ಜನರಲ್ಲಿ ಅಸಮಾಧಾನ ಹೆಚ್ಚುತ್ತಾ ಬಂದಾಗ, ಅವರು ಸಂಘಟಿತವಾಗಿ ಹೋರಾಟ ಆರಂಭಿಸಿದರು. ಗಾಂಧೀಜಿಯ ಸತ್ಯಾಗ್ರಹ ತತ್ವದಿಂದ ಪ್ರೇರಿತವಾದ ಈ ಹೋರಾಟ ಅಹಿಂಸಾತ್ಮಕ ರೀತಿಯಲ್ಲಿ ನಡೆಯಿತು. ಜನರು ಅರಣ್ಯ ಪ್ರದೇಶಗಳಿಗೆ ತೆರಳಿ ಮರ ಕಡಿಯುವ, ಹಣ್ಣು ಸಂಗ್ರಹಿಸುವ, ಎಲೆಗಳನ್ನು ಕತ್ತರಿಸುವಂತಹ ಚಟುವಟಿಕೆಗಳನ್ನು ಮಾಡಿ ತಮ್ಮ ಹಕ್ಕನ್ನು ವ್ಯಕ್ತಪಡಿಸಿದರು. ಈ ಕ್ರಮವು ಕೇವಲ ಅರಣ್ಯ

ಸಂಪತ್ತಿನ ಬಳಕೆಯ ಹಕ್ಕಿನ ಕುರಿತು ಮಾತ್ರವಲ್ಲ, ಪರಿಸರ ಸಂರಕ್ಷಣೆ ಮತ್ತು ಮಾನವ ಹಕ್ಕುಗಳ ನಡುವಿನ ಆಳವಾದ ಸಂಬಂಧವನ್ನು ಕೂಡ ಪ್ರಸ್ತಾಪಿಸಿತು.

ಅರಣ್ಯ ಸತ್ಯಾಗ್ರಹವು ಸ್ಥಳೀಯ ಆರ್ಥಿಕತೆ, ಸಂಸ್ಕೃತಿ ಮತ್ತು ಜೀವನೋಪಾಯಗಳ ಉಳಿವಿನ ಹೋರಾಟವಾಗಿತ್ತು. ಮಹಿಳೆಯರು ಈ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿದರು; ಅವರು ತಮ್ಮ ಕುಟುಂಬ ಮತ್ತು ಸಮುದಾಯದ ಪರವಾಗಿ ಅರಣ್ಯ ಸಂಪತ್ತುಗಳ ಹಕ್ಕಿಗಾಗಿ ಧೈರ್ಯವಾಗಿ ಮುಂಚೂಣಿಯಲ್ಲಿ ನಿಂತರು. ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ಮತ್ತು ಮಧ್ಯಪ್ರದೇಶದ ಅನೇಕ ಭಾಗಗಳಲ್ಲಿ ಈ ಚಳವಳಿ ವ್ಯಾಪಕ ಬೆಂಬಲ ಪಡೆದುಕೊಂಡಿತು.

ಈ ಹೋರಾಟದ ಮೂಲಕ ಅರಣ್ಯವು ಕೇವಲ ಸರ್ಕಾರದ ಆಸ್ತಿ ಅಲ್ಲ, ಜನರ ಬದುಕಿನ ಅವಿಭಾಜ್ಯ ಅಂಗ ಎಂಬ ಅರಿವು ಮೂಡಿತು. ಅದು ಗ್ರಾಮೀಣ ಜೀವನದಲ್ಲಿ ಸ್ವಾಭಿಮಾನ ಮತ್ತು ಸ್ವಾವಲಂಬನೆಯ ಅಂಕುರವನ್ನು ಬಿತ್ತಿತು. ಅರಣ್ಯ ಸತ್ಯಾಗ್ರಹವು ಮುಂದಿನ ದಿನಗಳಲ್ಲಿ ಅನೇಕ ಪರಿಸರ ಚಳವಳಿಗಳಿಗೆ ಪ್ರೇರಣೆಯಾಗಿ, ಭಾರತೀಯ ಜನರ ಹಕ್ಕು, ಗೌರವ ಮತ್ತು ಪರಿಸರ ಪ್ರಜ್ಞೆಯ ಸಜೀವ ಪ್ರತೀಕವಾಗಿ ಉಳಿಯಿತು.

**ಹಾವೇರಿ ಜಿಲ್ಲೆಯಲ್ಲಿ ಅರಣ್ಯ ಸತ್ಯಾಗ್ರಹ**

ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಚಳುವಳಿಗಳಲ್ಲಿ ಅರಣ್ಯ ಸತ್ಯಾಗ್ರಹವು ಒಂದು. ಹಾವೇರಿ ಜಿಲ್ಲೆಯಲ್ಲಿ ಅರಣ್ಯ ಸತ್ಯಾಗ್ರಹಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಶಿಗ್ಗಾವಿ, ಹಾನಗಲ್ಲ, ಬ್ಯಾಡಗಿ, ಹಿರೇಕೆರೂರು ತಾಲೂಕುಗಳಲ್ಲಿ ಈ ಚಳುವಳಿ ನಡೆಯಿತು. ಹಾನಗಲ್ಲು, ಹಾವೇರಿ ತಾಲೂಕಿನ ಆಲದಕಟ್ಟಿ, ಕಣ್ಣೂರು, ಸಂಗೂರು, ನಾಗನೂರು, ಬೆಂಚಿಹಳ್ಳಿ ಇನ್ನೂ ಮುಂತಾದ ಗ್ರಾಮಗಳಲ್ಲಿ ಜನರು ಹುಲಬನ್ನಿ ಲೀಲಾವನ್ನು ಹಿಡಿಯಲಿಲ್ಲ. ಲೀಲಾವ ಅಂದರೆ ಗ್ರಾಮಗಳಲ್ಲಿ ಊರ ದನಗಳ ಆಹಾರಕ್ಕಾಗಿ (ಮೇವು) ಸರಕಾರಿ (ಗೋಮಾಳ) ಜಾಗೆಯಿದ್ದು, ಅದರಲ್ಲಿ ಊರ ದನ ಕರುಗಳನ್ನು ಗ್ರಾಮಗಳ ಜನತೆ ಮೇಯಿಸುತ್ತಿದ್ದರು. ಬ್ರಿಟಿಷ್ ಸರಕಾರ ಆ ಮೇಯುವ ದನ ಕರುಗಳಿಗೆ ತೆರಿಗೆ ವಿಧಿಸಿತ್ತು. ಹಾಗಾಗಿ ಆ ಗ್ರಾಮಗಳಿಗೆ ಹೋಗಿ ಕೃಷಿಕರಿಗೆ ಪರಮಣ್ಣ ಹೊಸಮನಿ, ವೆಂಕಟೇಶ ಚವಟಿ ಮತ್ತು ಗೋವಿಂದಾಚಾರ್ಯ ಅಗ್ನಿಹೋತ್ರಿ ಮುಂತಾದವರು ಮನೆ ಮನೆಗಳಿಗೆ ಹೋಗಿ 'ನೀವು ಯಾರು ಸರಕಾರ ಮಾಡುವ ಲೀಲಾವನ್ನು ಹಿಡಿಯಬೇಡಿ' ಎಂದು ರೈತರ ಮನವೊಲಿಸುತ್ತಿದ್ದರು.[1]

ಬಂಕಾಪುರ ತಾಲೂಕಿನ ದುಂಡಸಿ ಕೇಂದ್ರವನ್ನಾಗಿ ಮಾಡಿಕೊಂಡು "1930 ನವಂಬರ್ ವೇಳೆಗೆ ಸುಮಾರು 3 ಬಾರಿ ಕಾನನ ಮೇಲೆ ಸತ್ಯಾಗ್ರಹಗಳು ನಡೆದವು. ಇದೇ ರೀತಿ ಹಾನಗಲ್ಲ ತಾಲೂಕಿನ ಬಮ್ಮನಹಳ್ಳಿಯಲ್ಲಿ ಹುಲಬನ್ನಿ ನಿರಾಕರಣೆ ಮತ್ತು ಗಂಧದ ಗಿಡಗಳ ಸಂಹಾರ ಮಾಡಲಾಯಿತು.[2]

1930ರಲ್ಲಿ ಉಪ್ಪಿನ ಸತ್ಯಾಗ್ರಹ ಮಾಡುವುದರ ಸಲುವಾಗಿ ಮಾದವರಾವ್ ಬುರ್ಲಿ ನಾಯಕತ್ವದಲ್ಲಿ 80 ಜನ ಚಳುವಳಿಗಾರರು ಅಂಕೋಲಾಕ್ಕೆ ಹೋಗುವಾಗ ಮಾರ್ಗ ಮಧ್ಯ ಬಂಕಾಪುರಕ್ಕೆ ಬಂದಾಗ ಅಲ್ಲಿ ಸಭೆ ನಡೆಸಿ ಸೇಂದಿ ಗಿಡ ಕಡಿಯುವ ಕಾರ್ಯಕ್ರಮವನ್ನು ನಿರ್ಧರಿಸಿದಂತೆ 23 ದಿನಗಳ ಕಾಲ ಸುತ್ತಮುತ್ತಲಿನ ಗಿಡಗಳನ್ನು ನಾಶ ಮಾಡಲಾಯಿತು. ನಂತರ ಶಂಕರ ದೀಕ್ಷಿತ್ ಕರ್ಮಠ ಎಂಬುವವರ ನಾಯಕತ್ವದಲ್ಲಿ ನೀರಲಗಿ ಗ್ರಾಮದ ಅಗಡಿಯವರು ಬಂಕಾಪುರದ ಹೇಜೀಬರ ಮನೆಗೆ ಬಂದು ತಮ್ಮ ಹೊಲದಲ್ಲಿದ್ದ ಮಾಲ್ಕಿ ಗಿಡಗಳನ್ನು ಕಡಿಯಲು ಕೇಳಿಕೊಂಡಾಗ ಅವರು ಪರವಾನಗಿ ಕೊಟ್ಟರು. ಆ ಸತ್ಯಾಗ್ರಹದಲ್ಲಿ

ಇದ್ದ ಪ್ರಮುಖರೆಂದರೆ ಅ.ನಾ.ಕುಂದಾಪುರ, ಶೇಷಾಚಾರ್ಯ ಮಡಿ, ತಿಪ್ಪಣ್ಣ ಕಲಾಲ, ಸೂರ್ಯಭಟ್ಟ ವೈದ್ಯ ವಾಮನ ಹನುಮಂತ ದೇಸಾಯಿ, ಫಕ್ಕೀರಪ್ಪ ಕಿತ್ತೂರು, ವೆಂಕಣ್ಣಾಚಾರ್ಯ ಮಡಿ, ಕೆ.ಎನ್. ಪುರೋಹಿತ, ಅಡಿವೆಪ್ಪ ಕಮಾಟ ಮುಂತಾದವರು ಸೇರಿ ಸೋಮವಾರ 10 ರಿಂದ ಜನ ಹುಡುಗರನ್ನು ಕರೆದುಕೊಂಡು ಸಂಜೆ ವೇಳೆಗೆ ಗಿಡಗಳನ್ನು ಉರುಳಿಸಲು ಪ್ರಾರಂಭಿಸಿದರು. ಈ ವೇಳೆಗೆ ಸೇಂದಿ ಗುತ್ತಿಗೆದಾರರು, 'ಇವು ನಮ್ಮ ದೇವತೆ, ಅವನ್ನು ನಾವು ಕಡಿಯಗೊಡುವುದಿಲ್ಲ' ಎಂದಾಗ ಶಂಕರ ದೀಕ್ಷಿತ್ ಕರ್ಮಾಕರು 'ನಾವು ಗಾಂಧೀಜಿ ಸಂದೇಶ ಪಾಲಿಸುತ್ತೇವೆ. ಕುಡಿಯುವುದು ನಿಮ್ಮ ಸತ್ವನಾಶಕ್ಕೆ ನಾಂದಿ' ಎಂದು ತಿಳಿಹೇಳಿದರು.[3]

"ಬಂಕಾಪುರದಲ್ಲಿ ಸೋಮವಾರ ಮೆರವಣಿಗೆ ಬೆಳಿಗ್ಗೆ 20ರಿಂದ 30 ಜನರಿಂದ ಮೆರವಣಿಗೆ ಪ್ರಾರಂಭವಾಯಿತು. ಶ್ರೀಮಂತರು, ಪ್ರಮುಖರು, ವ್ಯಾಪಾರಿಗಳು ಹೊರಟಿದ್ದರಿಂದ ಊರ ಎಲ್ಲ ರೈತಬಾಂಧವರು, ಕೂಲಿಕಾರರು ಹೀಗೆ ಒಬ್ಬರೂ ಉಳಿಯದಂತೆ ಬಂದು ಮೆರವಣಿಗೆಯಲ್ಲಿ ಸೇರತೊಡಗಿದರು. ಬಂಕಾಪುರದಿಂದ ಒಂದೂವರೆ ಮೈಲಿ ದೂರದಲ್ಲಿದ್ದ ಕುಂದೂರು ಗ್ರಾಮದಲ್ಲಿ ರಸ್ತೆ ಹಿಡಿಯದಂತೆ ಕಿಕ್ಕಿರಿದು ಸಾಗುತ್ತಿದ್ದ ಮೆರವಣಿಗೆಯ ಮುಂಭಾಗ ಇದ್ದರೆ ಕೊನೆಯದು ಇನ್ನೂ ಬಂಕಾಪುರದಲ್ಲಿದ್ದು, ಹನುಮಂತನ ಬಾಲದಂತೆ ಈ ಚಳುವಳಿಗಾರರ ಸೈನ್ಯ ಬೆಳೆಯುತ್ತಲೇ ಇತ್ತು." ದೊಡ್ಡ ಕುದುರೆಯ ಮೇಲೆ ಕುಳಿತ ಮುದವೀಡು ಕೃಷ್ಣರಾಯರು ಕೈಯಲ್ಲಿ ರಾಷ್ಟ್ರಧ್ವಜ ಹಿಡಿದು ಮೆರವಣಿಗೆಯ ಮುಂಚೂಣಿಯಲ್ಲಿದ್ದರೆ, ಚಳುವಳಿಗಾರರು ಕೈಯಲ್ಲಿ ಕೊಡ್ಲಿ ಹಿಡಿದು ಶಿಸ್ತಿನ ಸಿಪಾಯಿಗಳಂತೆ ಮೆರವಣಿಗೆ ಹೊರಟಿರುವುದನ್ನು ನೋಡಿದವರಿಗೆ ರೋಮಾಂಚನವಾಗುವಂತಿತ್ತು. ನೀರಲಗಿಯು ಶಿಗ್ಗಾವಿಯಿಂದ ನಾಲ್ಕು ಮೈಲು ದೂರದಲ್ಲಿದ್ದು ಅಲ್ಲಿಯವರೆಗೆ ಬಾಜಾ ಭಜಂತ್ರಿ ಸಹಿತ ನಡೆದ ಮೆರವಣಿಗೆಯನ್ನು ತಡೆಯಲು ತಾಲೂಕಾಧಿಕಾರಿಗಳು ಸಶಸ್ತ್ರ ಪೊಲೀಸ್ ಪಡೆಯೊಂದಿಗೆ ನಿಂತಿರಲು ಮುದವೀಡು ಕೃಷ್ಣರಾಯರು ಆ ಕಡೆ ಗಮನಹರಿಸದೆ ಮುಂದೆ ಸಾಗಿದರು.[4]

ಅರಣ್ಯ ಸತ್ಯಾಗ್ರಹದಿಂದಾದ ಅವಮಾನ ಹಾಗೂ ಮುಂದೆ ನಡೆಯಬಹುದಾದ ಅರಣ್ಯ ಸತ್ಯಾಗ್ರಹವನ್ನು ಹತ್ತಿಕ್ಕಲು ಸರಕಾರವು ಶಿಗ್ಗಾವಿಯಲ್ಲಿ ದರ್ಬಾರ್ ನಡೆಸುವ ಯೋಜನೆ ಮಾಡಿತು. ಆ ಪ್ರಕಾರ ಎಲ್ಲ ಗ್ರಾಮಗಳ ಗೌಡಶ್ಯಾನಭೋಗರಿಗೂ, ದೇಸಾಯಿದೇಶಪಾಂಡೆಗೂ, ಪ್ರಮುಖ ರೈತರಿಗೂ ಆಹ್ವಾನ ಕೊಡಲಾಯಿತು. ಈ ದರ್ಬಾರ್ ಕೂಡದಂತೆ ಸರಕಾರಿ ಕಾಯಿದೆ ಭಂಗ ಮಾಡಲು ಶಿಗ್ಗಾವಿ ಭಾಗದ ಚಳುವಳಿಗಾರರು ಶಂಕರ ದೀಕ್ಷಿತ್ ಕರ್ಮಾಕರ ನೇತೃತ್ವದಲ್ಲಿ ಸಭೆ ಸೇರಿದರು. ಜಿಲ್ಲಾ ಕಾಂಗ್ರೆಸ್ ಕಮಿಟಿಗೆ, ಸೇವಾದಳಕ್ಕೆ, ಸುತ್ತಮುತ್ತಲಿನ ಗ್ರಾಮದ ಸ್ವಯಂ ಸೇವಕರಿಗೆ ವಿಷಯ ತಿಳಿಸಲಾಯಿತು. ಇದಕ್ಕಾಗಿ ಶಿಗ್ಗಾವಿಯ ತರುಣರು ಕಾರ್ಯ ಪ್ರವೃತ್ತರಾದರು.[5]

ದರ್ಬಾರ್ ನಡೆಯುವ ದಿನ ಬರುವ ಜನರಿಗಾಗಿ ಸರಕಾರದ ವತಿಯಿಂದ ಕಚೇರಿಯ ಹತ್ತಿರ ಪೆಂಡಾಲ್ ಹಾಕಿಸಿ ಪೊಲೀಸರ ಕಾವಲು ಹಾಕಲಾಗಿತ್ತು. ಚಳುವಳಿಗಾರರು ಶಿಗ್ಗಾವಿ ಊರ ಹೊರಗಿನ ಅಗಸಿಯಲ್ಲಿ, ಪ್ರಮುಖ ಕೂಟಗಳಲ್ಲಿ ಸ್ವಯಂಸೇವಕರು ದರ್ಬಾರಿಗೆ ಬರುವ ಗಣ್ಯರನ್ನು ತಡೆದು ವಿನಯಪೂರ್ವಕವಾಗಿ ನಮಸ್ಕರಿಸಿ 'ಗುಲಾಮಗಿರಿಗೆ, ಬೂಟುಗಾಲಿಗೆ ನಮಸ್ಕಾರ ಹಾಕಲು ಏಕೆ ಹೋಗುತ್ತೀರಿ' ಎಂದು ತಿಳಿಹೇಳಿ ಹಿಂತಿರುಗಿ ಕಳುಹಿಸುತ್ತಿದ್ದರು.[6]

ಜಿಲ್ಲೆಯಲ್ಲಿ ಅರಣ್ಯ ಸತ್ಯಾಗ್ರಹಕ್ಕೆ ಸ್ಪಂದಿಸಿದ ಮತ್ತೊಂದು ಭಾಗವೆಂದರೆ ಹಿರೇಕೆರೂರು ತಾಲೂಕಿನ ನಾಗವಂದ ಗ್ರಾಮದ ಹತ್ತಿರ ಹಾರಿಕಟ್ಟಿ ಜಂಗಲ್ ಬ್ರಿಟಿಷ್ ಸರಕಾರದ ನಿಷೇದಿತ ಅರಣ್ಯವಾಗಿತ್ತು. "18.1.1932 ರಂದು 250ರಿಂದ 300 ಜನ ಚಳವಳಿಗಾರರ ತಂಡ ಹಾರಿಕಟ್ಟಿ ಜಂಗಲ್ ಕಡೆ ಹೊರಟಿತು. ಆ ತಂಡದ ನಾಯಕರುಗಳೆಂದರೆ ಹೇಮಪ್ಪ ವಿ. ಅಂಗಡಿ, ಮೆಣಸಿನಾಳದ ತಿಮ್ಮನಗೌಡ್ರ ಹಾಗೂ ಸಿದ್ದಪ್ಪ ಹಿರೇಮಾರ ಹೀಗೆ ಹೋದ ತಂಡ ಮುಕ್ಕಾಲು ಭಾಗದಷ್ಟು ಅರಣ್ಯವನ್ನು ನಾಶ ಮಾಡಿ ಬ್ರಿಟಿಷರ ವಿರುದ್ಧ ಕಾನೂನು ಭಂಗ ಮಾಡಿದರು. ಪೊಲೀಸರು ಚಳುವಳಿಗಾರರನ್ನು ಬಂಧಿಸಿದರು. ಅರಣ್ಯ ನಾಶ ಮಾಡಿದ್ದನ್ನು ಚಳುವಳಿಕಾರರು ಒಪ್ಪಿದ್ದರಿಂದ ಕೇಸ್ ನಂ 6/1932 ನೇದ್ದರಲ್ಲಿ ಇವರಿಗೆ 2 ವರ್ಷ ಶಿಕ್ಷೆ ಹಾಗೂ 50/ರೂ. ದಂಡ ವಿಧಿಸಿ ಯರವಾಡಾ ಜೈಲಿಗೆ ಕಳುಹಿಸಿದರು.[7] ತಿಮ್ಮನಗೌಡ ಯರವಡಾ ಜೈಲಿನಲ್ಲಿ ಉತ್ತರ ಭಾರತದ ಚಳುವಳಿಗಾರರಿಂದ ಹಿಂದಿ ಭಾಷೆ ಮತ್ತು ಚರಕದಿಂದ ನೂಲು ತೆಗೆಯುವುದನ್ನು ಕಲಿತು ಬಂದದ್ದು, ಅದನ್ನು ತಮ್ಮ ತಮ್ಮ ಭಾಗಗಳಲ್ಲಿ ಪ್ರಯೋಗಿಸಿದ್ದು ಮಹತ್ತರವಾದ ಬದಲಾವಣೆಗೆ ಕಾರಣವಾಯಿತೆನ್ನಬಹುದು." ಜಂಗಲ್ ಸತ್ಯಾಗ್ರಹದಿಂದ ಜೈಲು ಸೇರಿ ಬಿಡುಗಡೆಯಾಗಿ ಊರಿಗೆ ಬಂದಾಗ ತುಮ್ಮಿನಕಟ್ಟಿಯಲ್ಲಿ ತಿಮ್ಮನಗೌಡರನ್ನು ಮೆರವಣಿಗೆ ಮಾಡಿ ಸನ್ಮಾನಿಸಿದ್ದು, ಮುಂದಿನ ಯೋಜನೆಗಳಿಗೆ ಅಣಿಗೊಳಿಸುವಂತಿತ್ತು ಎಂಬ ಅವರೊಂದಿಗೆ ಚಳುವಳಿಯಲ್ಲಿ ಭಾಗವಹಿಸಿದ ತಿಮ್ಮನಗೌಡರ ತಂಡದ ಸದಸ್ಯ ಮೆಣಸಿನಾಳದ ಶಿವನಗೌಡ ಭ. ಮರಿಗೌಡ್ರ ಹೇಳಿಕೆಯು ದಾಖಲೆಗಳಿಗೆ ಸಾಕ್ಷಿಭೂತವಾಗಿದೆ.8

ಹಾವೇರಿ ಭಾಗದಲ್ಲಿ ಜಂಗಲ್ ಕಾಯ್ದೆ ಭಂಗ ಚಳುವಳಿಯನ್ನು ಬ್ಯಾಡಗಿ ತಾಲೂಕು ಕಲ್ಲೇದೇವರ ಗ್ರಾಮದ ಅಡವಿಯಲ್ಲಿ ಮಾಡಬೇಕೆಂದು ತೀರ್ಮಾನಿಸಲಾಯಿತು. "27.10.1930 ರಂದು ಮುಂಜಾನೆ ಗೋವಿಂದಾಚಾರ್ಯ ಅಗ್ನಿಹೋತ್ರಿ ನಾಯಕತ್ವದಲ್ಲಿ 8 ರಿಂದ 10 ಜನ ಸ್ವಯಂಸೇವಕರು ಹೊರಟರು. ಕಲ್ಲೇದೇವರಲ್ಲಿ ಮೆರವಣಿಗೆ ನಂತರ ಸಭೆಯಲ್ಲಿ ಗೋವಿಂದಾಚಾರ್ಯರ ಭಾಷಣವಾಗಿ ಊರ ಹೊರಗಿನ ಅಡವಿಯ ದಾರಿ ಹಿಡಿದರು. ಅವರೊಂದಿಗೆ ಕಲ್ಲೇದೇವರ ಸುತ್ತಮುತ್ತಲಿನ ಗ್ರಾಮದ ಅನೇಕ ನಾಗರಿಕರು ಸತ್ಯಾಗ್ರಹಕ್ಕಾಗಿ ಕೊಡಲಿಗಳಿಂದ ಅರಣ್ಯ ನಾಶ ಮಾಡಿದರು. ಫಾರೆಸ್ಟ್ ಗಾರ್ಡ್ ಮತ್ತು ಅರಣ್ಯ ಅಧಿಕಾರಿಗಳು ಎಲ್ಲ ಸ್ವಯಂಸೇವಕರ ಹೆಸರುಗಳನ್ನು ಬರೆದುಕೊಂಡು ಪಂಚನಾಮೆಯನ್ನು ಮಾಡಿದರು, ಯಾವ ಅಡಚಣೆ ಆಗದೇ ಅರಣ್ಯ ಸತ್ಯಾಗ್ರಹ ಯಶಸ್ವಿಯಾಗಿ ಕೊನೆಗೊಂಡಿತು.

**ಕೊನೆ ಟಿಪ್ಪಣಿಗಳು:**

1. ಶಂಕರನಾರಾಯಣ ರಾವ್ ಎನ್. ಪಿ., ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ಪ್ರಕಾಶಕರು ನವಕರ್ನಾಟಕ ಪಬ್ಲಿಕೇಶನ್, ಬೆಂಗಳೂರು. 2011, ಪು ಸಂ 285.
2. ಕೆಂಚಳ್ಳಿ ಹೇಮಪ್ಪ ಬಸವಣ್ಣಪ್ಪ, ಹಾವೇರಿ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು. (ಅಪ್ರಕಟಿತ ಪಿ ಎಚ್ ಡಿ ಸಂಶೋಧನಾ ಮಹಾಪ್ರಬಂಧ ) ಕನ್ನಡ ವಿ ವಿ ಹಂಪಿ, ಪು ಸಂ 122
3. ಕಾಮತ್ ಸೂರ್ಯನಾಥ, ಧಾರವಾಡ ಜಿಲ್ಲಾ ಗ್ಯಾಸೆಟಿಯರ, ಬೆಂಗಳೂರು, 1995, ಪು ಸಂ 134.
4. ಅದೇ ಪು ಸಂ 286
5. ಅದೇ ಪು ಸಂ 287
6. ಕೆಂಚಳ್ಳಿ ಹೇಮಪ್ಪ ಬಸವಣ್ಣಪ್ಪ, ಹಾವೇರಿ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು. (ಅಪ್ರಕಟಿತ ಪಿ ಎಚ್ ಡಿ ಸಂಶೋಧನಾ ಮಹಾಪ್ರಬಂಧ) ಕನ್ನಡ ವಿ ವಿ ಹಂಪಿ, ಪು ಸಂ 124
7. ಅದೇ ಪು ಸಂ 125
8. ಅದೇ ಪು ಸಂ 126

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.